2017 ಕ.ತೀ.ವ 1124

(ಧಾರವಾಡ ನ್ಯಾಯಪೀಠ)

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎಲ್. ನಾರಾಯಣ ಸ್ವಾಮಿ

ಡಾ॥ ಶಾಹಬುದ್ದೀನ್ –ವಿರುದ್ಧ– ಭಾರತ ಸರ್ಕಾರ ಮತ್ತು ಇತರರು*

**ಭಾರತೀಯ ವೈದ್ಯಕೀಯ ಕೇಂದ್ರ ಮಂಡಳ ಕಾಯಿದೆ 1970, ಸೆಕ್ಷನ್ 7:**

**ಪ್ರಸ್ತುತ ಪ್ರಕರಣದಲ್ಲಿ ಭಾರತೀಯ ವೈದ್ಯಕೀಯ ಕೇಂದ್ರ ಮಂಡಳ ಕಾಯಿದೆ, 1970, ಸೆಕ್ಷನ್ 7ರ ಅಡಿ ಕೇಂದ್ರ ಮಂಡಳಿಯ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಸದಸ್ಯರುಗಳು 5 ವರ್ಷದ ಅವಧಿಗೆ ನಾಮ ನಿರ್ದೇಶನವನ್ನು ಹೊಂದಿದ್ದು ಅವರು ಆ ಸ್ಥಾನಕ್ಕೆ ಪರ್ಯಾಯ ವ್ಯಕ್ತಿ ಚುನಾಯಿತನಾಗುವವರೆಗೆ ಅಥವಾ ನಾಮ ನಿರ್ದೇಶನ ಹೊಂದುವವರೆಗೆ ಆ ಸ್ಥಾನದಲ್ಲಿ ಮುಂದುವರೆಯಲು ಅರ್ಹರಾಗಿರುತ್ತಾರೆ.**

**ಆದ್ದರಿಂದ ಪ್ರಸ್ತುತ ಪ್ರಕರಣದಲ್ಲಿ ಅರ್ಜಿದಾರರನ್ನು ಅವರ ಸ್ಥಾನದಲ್ಲಿ ಮುಂದಿನ ವ್ಯಕ್ತಿಯನ್ನು ನಾಮ ನಿರ್ದೇಶನಗೊಳಿಸುವವರೆಗೆ ಮುಂದುವರೆಸಲು ಮೂರನೇ ಪ್ರತಿವಾದಿ ಭಾರತೀಯ ವೈದ್ಯಕೀಯ ಕೇಂದ್ರ ಮಂಡಳಿಗೆ ನಿರ್ದೇಶನ ನೀಡಿ ತೀರ್ಪು ನೀಡಲಾಗಿದೆ.**

ಅರ್ಜಿದಾರರ ಪರವಾಗಿ: ಶ್ರೀ ಎಸ್.ಎಸ್. ಪಾಟೀಲ್ ಮತ್ತು ಶ್ರೀ ಮಹಂತೇಶ್.ಆರ್ ಪಾಟೀಲ್, ವಕೀಲರು.

1 ಮತ್ತು 3ನೇ ಪ್ರತ್ಯರ್ಜಿದಾರರ ಪರವಾಗಿ: ಶ್ರೀ ಎಂ.ಬಿ. ಕಣವಿ, ಸಿಜಿಎಸ್‌ಸಿ,
2ನೇ ಪ್ರತ್ಯರ್ಜಿದಾರರ ಪರ: ಶ್ರೀ ರವಿ ಹೊಸಮನಿ, ಎಜಿಎ, 4ನೇ ಪ್ರತ್ಯರ್ಜಿದಾರರಿಗೆ ಜಾರಿ ಮಾಡಿದೆ.

*ರಿಟ್ ಅರ್ಜಿ ಸಂ: 100076/2017 (ಎಸ್‌ಆರ್‌ಇಎಸ್), ದಿನಾಂಕ: 8ನೇ ಫೆಬ್ರವರಿ, 2017.

## ಆದೇಶ

**ನ್ಯಾಯಮೂರ್ತಿ ಶ್ರೀ ಎಲ್. ನಾರಾಯಣ ಸ್ವಾಮಿ:**

ಅರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳು, ಅರ್ಜಿದಾರರು ಐದು ವರ್ಷಗಳ ಅವಧಿಗಾಗಿ 15.07.2011 ರಂದು ಭಾರತೀಯ ವೈದ್ಯಕೀಯ ಪದ್ಧತಿಯ ಕೇಂದ್ರ ಪರಿಷತ್ತಿನ ಸದಸ್ಯರಂತೆ ಚುನಾಯಿತರಾಗಿರುತ್ತಾರೆ. ಸದರಿ ಐದು ವರ್ಷಗಳ ಕಾಲಾವಧಿ ಪೂರ್ಣಗೊಂಡಿರುತ್ತದೆ. ಆದ್ದರಿಂದ, ಪ್ರತ್ಯರ್ಜಿದಾರ ಸಂ. 3 ಭಾರತೀಯ ವೈದ್ಯ ಪದ್ಧತಿಯ ಕೇಂದ್ರ ಪರಿಷತ್ತು ಅರ್ಜಿದಾರರಿಗೆ ಯಾವುದೇ ಸಭಾ ನಡವಳಿಯನ್ನು ನೀಡಿರುವುದಿಲ್ಲ ಎಂದು ನಿವೇದಿಸಿಕೊಂಡಿರುತ್ತಾರೆ. ಅರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳು, ಅರ್ಜಿದಾರರು, ಮುಂಬರುವ ಆಡಳಿತ ಮಂಡಳಿಯು ಅಧಿಕಾರಕ್ಕೆ ಬರುವವರೆಗೂ ನೋಟೀಸ್‌ನ್ನು ಸ್ವೀಕರಿಸಲು ಹಕ್ಕುಳ್ಳವರಾಗಿರುತ್ತಾರೆಂದು ನಿವೇದಿಸಿಕೊಂಡಿರುತ್ತಾರೆ.

2. ಈ ನಿವೇದನೆಗೆ ಪೂರಕವಾಗಿ, ಮಾನ್ಯ ನ್ಯಾಯವಾದಿಗಳು ಕೇಂದ್ರ ಪರಿಷತ್ತಿನ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರು ಹಾಗೂ ಸದಸ್ಯರುಗಳು ತಮ್ಮ ಪದವನ್ನು ಚುನಾವಣೆ ಅಥವಾ ನಾಮ ನಿರ್ದೇಶನ ಅಥವಾ ತಮ್ಮ ಉತ್ತರಾಧಿಕಾರಿಯು ಯುಕ್ತವಾಗಿ ಚುನಾಯಿತರಾಗುವ ಅಥವಾ ನಾಮನಿರ್ದೇಶನರಾಗುವವರೆಗಿನ ದಿನಾಂಕದಿಂದ ಐದು ವರ್ಷಗಳ ಅವಧಿಯವರೆಗು ಅಥವಾ ಅದರಲ್ಲಿ ಯಾವುದು ದೀರ್ಘವಾಗಿರುತ್ತದೋ ಆ ದಿನಾಂಕದವರೆಗೂ ಪದವನ್ನು ಹೊಂದಿರತಕ್ಕದ್ದೆಂಬ ಉದ್ದೇಶವನ್ನು ಹೊಂದಿರುವಂತ ಭಾರತೀಯ ವೈದ್ಯ ಪದ್ಧತಿ ಕೇಂದ್ರ ಪರಿಷತ್ತು ಅಧಿನಿಯಮ, 1970ರ 7ನೇ ಪ್ರಕರಣವನ್ನು ಆಧಾರವಾಗಿಟ್ಟುಕೊಂಡು ತಮ್ಮ ವಾದವನ್ನು ಮಂಡಿಸಿರುತ್ತಾರೆ.

3. ಈ ಉಪಬಂಧಗಳ ಹಿನ್ನೆಲೆಯಲ್ಲಿ, ಮುಂದಿನ ಚುನಾವಣೆಯು ಕೂಡಲೇ ನಡೆಯದೆ ಇರುವುದರಿಂದ, ಇವರ ಉತ್ತರಾಧಿಕಾರಿಗಳು ಚುನಾಯಿತರಾಗಿ ಬಂದಿರುವುದಿಲ್ಲವಾದ್ದರಿಂದ, ಮುಂದಿನ ನಿರ್ಣಯವು ಪದಗ್ರಹಣ ಮಾಡುವವರೆಗೂ ಇದೇ ಮುಂದುವರೆಯತಕ್ಕದ್ದು. ತಮ್ಮ ನಿವೇದನೆಗಳಿಗೆ ಪೂರಕವಾಗಿ, ಮಾನ್ಯ

ನ್ಯಾಯವಾದಿಗಳು ಪಾಟ್ನಾ ಉಚ್ಚ ನ್ಯಾಯಾಲಯದ ತೀರ್ಪನ್ನು ಅಳವಡಿಸಿಕೊಂಡಿರುವ ರಿಟ್ ಅರ್ಜಿ ಸಂ.18797/2016ರಲ್ಲಿ ಮಾನ್ಯ ಪಾಟ್ನಾ ಉಚ್ಚ ನ್ಯಾಯಾಲಯದ ತೀರ್ಪು ಹಾಗೂ ಮಾನ್ಯ ಗುಜರಾತ್ ಉಚ್ಚ ನ್ಯಾಯಾಲಯದ ಮತ್ತೊಂದು ತೀರ್ಪನ್ನು ಉಲ್ಲೇಖಿಸಿರುತ್ತಾರೆ.

4. ಪ್ರತ್ಯರ್ಜಿದಾರ ಸಂ.3ಕ್ಕೆ ಸಂಬಂಧಿಸಿದ ಮಾನ್ಯ ವಕೀಲರು, ರಿಟ್ ಅರ್ಜಿಯನ್ನು ವಜಾಗೊಳಿಸಲು ನಿವೇದಿಸಿಕೊಂಡಿರುತ್ತಾರೆ. ಅರ್ಜಿದಾರರು ಅಹವಾಲನ್ನು ಹೇಳಿಕೊಳ್ಳುವ ಹಕ್ಕನ್ನು ಹೊಂದಿರುವುದಿಲ್ಲ ಹಾಗೂ ಈ ಅರ್ಜಿಯು ಊರ್ಜಿತವಾಗಿರುವುದಿಲ್ಲ ಹಾಗೂ ಇದು ಕೇವಲ ಪ್ರತ್ಯರ್ಜಿದಾರ ಸಂ.3 ಅರ್ಜಿದಾರರಿಗೆ ನೋಟೀಸನ್ನು ನೀಡಲು ಮಾತ್ರ ಇರುವಂತೆದ್ದೆಂದು ನಿವೇದಿಸಿಕೊಂಡಿರುತ್ತಾರೆ.

5. ಪಕ್ಷಕಾರರ ಪರ ಹಾಜರಾದ ಮಾನ್ಯ ವಕೀಲರುಗಳ ವಾದವನ್ನು ಆಲಿಸಿರುತ್ತೇವೆ ಹಾಗೂ ಅರ್ಜಿ ಪತ್ರಗಳನ್ನು ಪರಿಶೀಲಿಸಿರುತ್ತೇವೆ.

6. ಪರಿಷತ್ತಿನ ಚುನಾವಣೆಗಳನ್ನು ಅಧಿನಿಯಮದ ಉಪಬಂಧಗಳಿಗನುಸಾರವಾಗಿ ನಡೆಸಲಾಗಿರುತ್ತದೆ. ಪದದ ಚುನಾಯಿತ ಅವಧಿಯು ಐದು ವರ್ಷಗಳಾಗಿರುತ್ತವೆ ಅಥವಾ ಹೊಸದಾಗಿ ಚುನಾಯಿತವಾದ ಅಥವಾ ನಾಮನಿರ್ದೇಶಿತವಾದ ನಿರ್ಣಯವು ಕರ್ತವ್ಯವನ್ನು ವಹಿಸಿಕೊಳ್ಳುವವರೆಗಿನದಾಗಿರುತ್ತದೆಂದು ಹೇಳಲಾಗಿರುತ್ತದೆ. ಪ್ರಸ್ತುತ ಪ್ರಕರಣದಲ್ಲಿ, ಚುನಾವಣೆಯು ನಡೆದಿರುವುದಿಲ್ಲ ಹಾಗೂ ಉತ್ತರಾಧಿಕಾರಿಯನ್ನು ಯುಕ್ತವಾಗಿ ಚುನಾಯಿಸಲಾಗಿರುವುದಿಲ್ಲ. ಈ ಸಂದರ್ಭಗಳಡಿಯಲ್ಲಿ ಸದರಿ ಉಪಬಂಧಗಳ ಮೇರೆಗೆ, ಅಧಿನಿಯಮ 7ನೇ ಪ್ರಕರಣಕ್ಕೆ ಅನುಸಾರವಾಗಿ ಸದರಿ ವ್ಯವಸ್ಥೆಯನ್ನು ಮಾಡುವವರೆಗೆ ಆತನನ್ನೇ ಮುಂದುವರೆಸಬೇಕಾಗುತ್ತದೆ. ಹಾಗಾಗಿ, ಮುಂದಿನ ನಿರ್ಣಯವು ಕರ್ತವ್ಯಗಳನ್ನು ವಹಿಸಿಕೊಳ್ಳುವವರೆಗೂ, ಈತನನ್ನೇ ಮುಂದುವರೆಸಲಾಗಿರುತ್ತದೆಂದೂ ಅರ್ಜಿದಾರರ ಗಮನಕ್ಕೆ ತರಲು ಅಥವಾ ಪತ್ರ ಬರೆಯಲು 3ನೇ ಪ್ರತ್ಯರ್ಜಿದಾರರಿಗೆ ನಿರ್ದೇಶನವನ್ನು ನೀಡಲಾಗಿದೆ.

ಈ ಅಭಿಪ್ರಾಯಗಳೊಂದಿಗೆ, ಅರ್ಜಿಯನ್ನು ವಿಲೆ ಮಾಡಲಾಗಿರುತ್ತದೆ.

---

92